ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1616
2. ಸದಸ್ಯರ ಹೆಸರು : ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 18.03.2021
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿ

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಪದವಿಯಲ್ಲಿ ಮೊದಲ ರ್‍ಯಾಂಕ್ ಗಳಿಸಿದ ಅಭ್ಯರ್ಥಿಗಳಿಗೆ ನೇರವಾಗಿ ಗೆಜೆಟೆಡ್ ಅಧಿಕಾರಿಯಾಗಿ ನೇಮಕ ಮಾಡುವ ಪದ್ಧತಿ ಹಿಂದೆ ಇದ್ದು ಈಗಲೂ ಇದು ಮುಂದುವರೆದಿದೆಯೇ :	ಕರ್ನಾಟಕ ಸಿವಿಲ್ ಸೇವೆಗಳು (ಗ್ರೂಪ್-ಎ ಮತ್ತು ಗ್ರೂಪ್ ಬಿ ವೃಂದದ ಹುದ್ದೆಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳ ವಿಶೇಷ ನೇಮಕಾತಿ) ನಿಯಮಗಳು, 1985 ದಿನಾಂಕ: 11.04.1985 ರಿಂದ ಜಾರಿಗೆ ಬಂದಿದ್ದು, ಪ್ರಸ್ತುತ ಚಾಲ್ತಿಯಲ್ಲಿರುತ್ತವೆ.
(ಆ)	ಕಳೆದ 3 ವರ್ಷಗಳಲ್ಲಿ ಈ ರೀತಿ ರ್‍ಯಾಂಕ್ ಪಡೆದ ಎಷ್ಟು ಜನರಿಗೆ ನೇರವಾಗಿ ಗೆಜೆಟೆಡ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ; (ವಿವರ ನೀಡುವುದು)	1985ರ ನಿಯಮಗಳಡಿ 2004ರವರೆಗೆ ವಿವಿಧ ಗುಂಪು-ಎ ಮತ್ತು ಗುಂಪು-ಬಿ ಹುದ್ದೆಗಳಿಗೆ 95 ಅಭ್ಯರ್ಥಿಗಳನ್ನು ಆಯ್ಕೆ/ನೇಮಕ ಮಾಡಲಾಗಿದೆ. ತದನಂತರ, ಯಾವುದೇ ಆಡಳಿತ ಇಲಾಖೆಗಳು ಈ ವರ್ಗದ ಪ್ರಾತಿನಿಧ್ಯತೆಯಲ್ಲಿ ಕೊರತೆ ರಿಕ್ತಸ್ಥಾನಗಳನ್ನು ವರದಿ ಮಾಡದಿರುವ ಕಾರಣ ಈ ನಿಯಮಗಳಡಿ ಯಾವುದೇ ನೇಮಕಾತಿ ಆಗಿರುವುದಿಲ್ಲ.
	ಕಳೆದ 3 ವರ್ಷಗಳಲ್ಲಿ ಆಯ್ಕೆಯಾದ ಎಷ್ಟು ಜನರನ್ನು ಯಾವ ಯಾವ ಹುದ್ದೆಗಳಿಗೆ ನೇಮಕ ಮಾಡಲಾಗಿದೆ. (ವಿವರ ನೀಡುವುದು)	

ಸಂಖ್ಯೆ: ಸಿಆಸುಇ 31 ಸೇವನ 2021

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ